**ದಿನಾಂಕ 01.08.2026** **ಓ ಎಸ್ 48/2019**

**ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಭೋಧಿಸಲಾಯಿತು.** **ಡಿಡಬ್ಲ್ಯೂ-2**

**ಪಾಟೀ ಸವಾಲುಃ ವಾದಿ ಪರ ವಕೀಲರಿಂದಃ**

ನಾನು ಎಸ್ ಎಸ್ ಎಲ್ ಸಿ ವರೆಗೆ ಓದಿದ್ದೇನೆ. ವಾದಿ ಏನು ಕೆಲಸ ಮಾಡುತ್ತಾರೆ ಎಂದು ನನಗೆ ಗೊತ್ತು. ವಾದಿ ಪ್ರತಿವಾದಿ 1, 5 ಮತ್ತು 6 ರವರ ವಿರುದ್ಧ ದಾವೆಯನ್ನು ಹೂಡಿದ್ದಾರೆ. ಏನು ಪರಿಹಾರ ಕೇಳಿದ್ದಾರೆ ಎಂದು ನನಗೆ ಗೊತ್ತಿಲ್ಲ. ವಾದಿ ಯಾವ ದಾಖಲೆಗಳನ್ನು ನ್ಯಾಯಲಯಕ್ಕೆ ಹಾಜರುಪಡಿಸಿದ್ದಾರೆ ಎಂದು ಮಾಹಿತಿ ಇದೆಯೇ ಎಂದರೆ ಸಾಕ್ಷಿಯು 40 ವರ್ಷಗಳ ಹಿಂದಿನ ಕರಾರು ಪತ್ರ ಇದೆ ಎಂದು ಮತ್ತು ಅದನ್ನು ಸಲ್ಲಿಸಿದ್ದಾರೆ ಎಂದು ನನಗೆ ಮಾಹಿತಿ ಇದೆ. ಆ ಕಾರಾರು ಪತ್ರವನ್ನು 1 ನೇ ಪ್ರತಿವಾದಿಯ ತಂದೆ ವಾದಿಗೆ ಬರೆದುಕೊಟ್ಟಿದ್ದರು ಎಂದು ನನಗೆ 1 ನೇ ಪ್ರತಿವಾದಿ ತಿಳಿಸಿದ್ದರು.

2017 ರ ಮೊದಲು ದಾವಾ ಸ್ವತ್ತು ಯಾವ ಸ್ಥಿತಿಯಲ್ಲಿ ಇತ್ತು ಎಂದು ನನಗೆ ಗೊತ್ತಿಲ್ಲ. ಆ ಸ್ವತ್ತಿನಲ್ಲಿ ವಾದಿ ಸ್ವಾಧೀನದಲ್ಲಿ ಇದ್ದಾನೋ ಇಲ್ಲವೋ ಎಂದು ನನಗೆ ಗೊತ್ತಿಲ್ಲ. ನಾವು ಖರೀದಿ ಮಾಡಿದಾಗ ದಾವಾ ಸ್ವತ್ತು ಖಾಲಿ ನಿವೇಶನ ಇತ್ತು. ನಾನು ದಾವಾ ಸ್ವತ್ತನ್ನು ಖರೀದಿ ಮಾಡುವ ಮೊದಲು ಹರಿಹರದ ನೀಲಕಂಠ ನಗರದ 1 ನೇ ಮೇನ್ 1 ನೇ ಕ್ರಾಸ್ ನಲ್ಲಿ ವಾಸವಿದ್ದೆ. ದಾವಾ ಸ್ವತ್ತು ಮೊದಲು 1 ನೇ ಪ್ರತಿವಾದಿಯ ತಂದೆ ನಂಜುಂಡಪ್ಪನಿಗೆ ಸೇರಿದ್ದು, ದಾವಾ ಸ್ವತ್ತು ಸರ್ವೆ ನಂ. 18 ಕ್ಕೆ ಸಂಬಂಧಪಟ್ಟ ಸ್ವತ್ತು ಎಂದರೆ ಸರಿ. ಸರ್ವೆ ನಂ. 18 ಒಟ್ಟು ವಿಸ್ತೀರ್ಣ 2.00 ಎಕರೆ ಎಂದರೆ ನನಗೆ ಗೊತ್ತಿಲ್ಲ. ದಿನಾಂಕ 24.11.1997 ರಂದು 1 ನೇ ಪ್ರತಿವಾದಿಯ ತಂದೆ ಮತ್ತು ಆತನ ಸಹೋದರರ ಮಧ್ಯ ಆದ ನೋಂದಾಯಿತ ಪಾಲುವಿಭಾಗದಲ್ಲಿ ಸರ್ವೆ ನಂ. 18/1, 6.36 ಎಕರೆ 1 ನೇ ಪ್ರತಿವಾದಿಯ ಹಿಸ್ಸೆಗೆ ಬಂದಿರುತ್ತದೆ ಎಂದರೆ ನನಗೆ ಗೊತ್ತಿಲ್ಲ. ಸರ್ವೆ ನಂ. 18/1 ರಲ್ಲಿ ಭಾಗಗಳನ್ನು ಮಾಡಿ 1 ನೇ ಪ್ರತಿವಾದಿಯ ತಂದೆ ಬೇರೆಯವರಿಗೆ ಮಾರಾಟ ಮಾಡಿದ್ದಾರೆ ಎಂದರೆ ನನಗೆ ಗೊತ್ತಿಲ್ಲ. ಸರ್ವೆ ನಂ. 18/1 ರಲ್ಲಿ ಒಟ್ಟು 62 ನಿವೇಶನಗಳನ್ನು ಮಾಡಿದ್ದಾರೆ ಎಂದರೆ ನನಗೆ ಗೊತ್ತಿಲ್ಲ.

(ಈ ಹಂತದಲ್ಲಿ ಸಾಕ್ಷಿಯ ಮುಂದುವರೆದ ಪಾಟೀ ಸವಾಲಿಗಾಗಿ ಕಾಲಾವಕಾಶ ಕೋರಿದ್ದು, ಮುಂದೂಡಲಾಯಿತು.)

(ಮುಕ್ತ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನದಂತೆ ಬೆರಳಚ್ಚುಪಡಿಸಲಾಯಿತು.)

ಓದಿ ಹೇಳಿ ಕೇಳಿ ಸರಿ ಇದೆ.

1 ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು
ಮತ್ತು ಜೆ ಎಂ ಎಫ್ ಸಿ, ಹರಿಹರ